

ಕಲಾವಿದರು, ನಿರ್ದೇಶಕರಿಂದ ಸಿನಿಮಾ ಪಾಠವನ್ನೂ ಕಲಿತಿದ್ದಾರೆ. ಅದು ಅವರ ಜೀವನನ್ನೇ ರೂಪಿಸುವಂಥ ಪಾಠ.

'ದೃಶ್ಯ 2 ಸಿನಿಮಾದಲ್ಲಿ ನನಗೆ ರವಿಚಂದ್ರನ್, ನವ್ಯಾ ನಾಯರ್ ಮತ್ತು ನಿರ್ದೇಶಕ ವಾಸು ಎಷ್ಟೊಂದು ವಿಷಯಗಳನ್ನು ಹೇಳಿಕೊಟ್ಟರೆಂದರೆ, ಅದೊಂದು ರೀತಿಯಲ್ಲಿ ತರಬೇತಿ ಶಿಬಿರದ ಹಾಗಿತ್ತು. ಹಾಗೆಂದು ಅವರು ಮೂರೂ ಜನ ಪ್ಲ್ಯಾನ್ ಮಾಡಿಕೊಂಡೇನೂ ಹೇಳಿಕೊಡಲಿಲ್ಲ. ಪ್ರತಿಯೊಬ್ಬರೂ ಪ್ರೀತಿಯಿಂದ ಅವರಿಗೆ ಅನಿಸಿದ್ದು, ಅವರ ಅನುಭವದಲ್ಲಿ ಕಲಿತಿದ್ದನ್ನು ನನಗೆ ಹೇಳಿಕೊಡುತ್ತ ಹೋದರು. ಅದು ಬರೀ ಈ ಸಿನಿಮಾಗೇ ಸೀಮಿತವಾಗಿರಲಿಲ್ಲ. ಬದಲಿಗೆ ನನ್ನ ವೃತ್ತಿಜೀವನಕ್ಕೇ ಸಂಬಂಧಿಸಿದ್ದು. ಚಿತ್ರೀಕರಣದುದ್ದಕ್ಕೂ ನನ್ನನ್ನು ಅಂಬೆಗಾಲಿಡುತ್ತಿರುವ ಮಗುವನ್ನು ನೋಡಿಕೊಳ್ಳುವಂತೆ ನೋಡಿಕೊಂಡರು. ಅವರ ಅನುಭವ, ಕಾಳಜಿ ಎಲ್ಲದರಿಂದ ಕಲಿತ ಪಾಠಗಳು ಖಂಡಿತ ನನಗೆ ಜೀವನುದ್ದಕ್ಕೂ ಸಹಾಯವಾಗುತ್ತವೆ' ಎನ್ನುತ್ತಾರೆ ಅವರು.

ಅಂದಹಾಗೆ ಆರೋಹಿ 'ದೃಶ್ಯ' ಸಿನಿಮಾದ ಮಲಯಾಳಂ ಆವೃತ್ತಿಯನ್ನು ನೋಡಿರಲಿಲ್ಲವಂತೆ. ಹಾಗೆಯೇ ಈಗಲೂ 'ದೃಶ್ಯ 2' ಸಿನಿಮಾದ ಮಲಯಾಳಂ ಆವೃತ್ತಿ ನೋಡಿಲ್ಲ. 'ಆ ಸಿನಿಮಾ ನಾನು ನೋಡದೇ ನಟಿಸಿದ್ದೆ. ಹಿಟ್ ಆಯಿತು. ಇದೂ ಹಿಟ್ ಆಗಲಿ ಎಂದು ಮೂಲ ಸಿನಿಮಾ ನೋಡಿಲ್ಲ' ಎಂದು ನಗುತ್ತಾರೆ.

ಕೊರೊನಾ ಕಾರ್ಮೋಡ ಮೆಲ್ಲನೆ ಕರಗುತ್ತಿರುವ ಹಾಗೆ ಆರೋಹಿಗೂ ಅವಕಾಶಗಳ ಕೋಲ್ಮಿಂಚುಗಳು ಸಿಗುತ್ತಿವೆ. ಈಗಾಗಲೇ ಒಂದು ತೆಲುಗು ಸಿನಿಮಾದಲ್ಲಿ ನಟಿಸುವ ಅವಕಾಶ ಬಂದಿದೆ. ಕನ್ನಡದಲ್ಲಿ ಮೂರು ಕಥೆಗಳನ್ನು ಕೇಳಿದ್ದಾರಂತೆ. ಅವೆಲ್ಲವೂ ಮಾತುಕತೆಯ ಹಂತದಲ್ಲಿವೆ. ಇನ್ನು ಸ್ವಲ್ಪ ದಿನಗಳಲ್ಲಿಯೇ ಹೊಸ ಸಿನಿಮಾದ ಸುದ್ದಿ ಕೊಡುತ್ತೇನೆ ಎನ್ನುವ ಅವರಿಗೆ, ಒಳ್ಳೆಯ ಸಿನಿಮಾಗಳಲ್ಲಿ, ಒಳ್ಳೆಯ ನಟರ ಜೊತೆಗೆ, ಒಳ್ಳೆಯ ನಿರ್ದೇಶಕರ ಜೊತೆಗೆ ಕೆಲಸ ಮಾಡಬೇಕು ಎಂಬ ಆಸೆ ಇದೆ. ಆ ಆಸೆಯನ್ನು ಪೂರೈಸುವ ಅವಕಾಶಗಳು ತಮ್ಮನ್ನು ಅರಸಿಕೊಂಡು ಬರಲಿವೆ ಎಂಬ ನಂಬಿಕೆಯಲ್ಲಿ ಅವರಿದ್ದಾರೆ. ■



# ರಂಗನಾಯಕನ ರಂಗು!

ನಿರ್ದೇಶಕ ಗುರುಪ್ರಸಾದ್ ಅವರ ಹೆಸರಿನ ಜೊತೆಗೆ ಸೇರಿಯೇ ಹೋದ ಸಿನಿಮಾ 'ಮಠ'. ಆ ಸಿನಿಮಾದಲ್ಲಿ ಗುರುಪ್ರಸಾದ್ ಬರವಣಿಗೆಯ ಹರಿತ ಎಷ್ಟು ಕೆಲಸ ಮಾಡಿತ್ತೋ, ಜಗ್ಗೇಶ್ ಅವರ ವಿಶಿಷ್ಟ ಕಾಮಿಡಿ ಟೈಮಿಂಗ್ ಮತ್ತು ಮ್ಯಾನರಿಸಂ ಕೂಡ ಅಷ್ಟೇ ಅದ್ಭುತವಾಗಿ ಕೆಲಸ ಮಾಡಿತ್ತು. ಅದರ ನಂತರ ಗುರು ಮತ್ತು ಜಗ್ಗೇಶ್ ಕಾಂಬಿನೇಷನ್‌ನಲ್ಲಿ ಮೂಡಿಬಂದ 'ಎದ್ದೇಳು ಮಂಜುನಾಥ' ಕೂಡ ಹಿಟ್ ಆಗಿತ್ತು. ಅದರ ನಂತರ ಅವರಿಬ್ಬರಲ್ಲಿ ಉಂಟಾದ ಮನಸ್ತಾಪದ ಕಾರಣದಿಂದ ಮತ್ತೆ ಒಟ್ಟಿಗೆ ಕೆಲಸ ಮಾಡಿರಲಿಲ್ಲ. ಈಗ ಕೆಲವು ವರ್ಷಗಳಿಂದ ಆ ಜೋಡಿ ಮತ್ತೆ ಒಂದಾಗುವ ಸುದ್ದಿ ಓಡಾಡುತ್ತಿತ್ತು. ಅದಕ್ಕೆ ಪೂರಕವಾಗಿ 'ರಂಗನಾಯಕ' ಎಂಬ ಸಿನಿಮಾದಲ್ಲಿ ನಾನು ಮತ್ತು ಜಗ್ಗೇಶ್ ಒಟ್ಟಿಗೆ ಕೆಲಸ ಮಾಡುತ್ತೇವೆ ಎಂದು ಸ್ವತಃ ಗುರುಪ್ರಸಾದ್ ಹೇಳಿಕೊಂಡಿದ್ದರು.

ಆದರೆ ಇತ್ತೀಚೆಗೆ ಗುರುಪ್ರಸಾದ್ ಸಿನಿಮಾಗಿಂತ ಉಳಿದ ಚಟುವಟಿಕೆಗಳಲ್ಲಿಯೇ ಹೆಚ್ಚು ಮಗ್ನರಾಗಿರುವಂತೆ ತೋರುತ್ತಿದೆ. ಅವರು ಘೋಷಿಸಿದ ಕೆಲವು ಸಿನಿಮಾಗಳು ಘೋಷಣೆಯಲ್ಲಿಯೇ ಮುಗಿದೂ ಹೋಗಿವೆ. ಯೂಟ್ಯೂಬ್‌ನಲ್ಲಿ, ಕ್ಲಬ್‌ಹೌಸ್‌ಗಳಲ್ಲಿ, ತಮ್ಮದೇ ಸಿನಿಮಾದ ಒಂದು ಪಾತ್ರವಾಗಿಬಿಟ್ಟಿರುವಂತೆ ಮಾತುಕತೆಯ ಪ್ರಹಸನದಲ್ಲಿ ತೊಡಗಿರುವ ಗುರು ಅವರ 'ರಂಗನಾಯಕ'ನೂ ಮಾಯವಾಗಿದ್ದಾನೆ ಎಂದೇ ಅಂದುಕೊಂಡಿದ್ದರು. ಆದರೆ ಆ ಊಹಾಪೋಹಗಳನ್ನು ಸುಳ್ಳಾಗಿಸುವಂತೆ 'ರಂಗನಾಯಕ'ನ ಆರ್ಭಟ ಮತ್ತೆ ಶುರುವಾಗಿದೆ. ಇತ್ತೀಚೆಗೆ ಬೆಂಗಳೂರಿನ ಹೊರವಲಯದಲ್ಲಿ ಒಂದು ದೊಡ್ಡ ಸೆಟ್ ಹಾಕಿ ಶೂಟಿಂಗ್ ಶುರುಮಾಡಿರುವ ಗುರು, ಪತ್ರಕರ್ತರನ್ನು ಕರೆದು ಸುದ್ದಿಗೋಷ್ಠಿಯನ್ನೂ ಮಾಡಿದ್ದಾರೆ.


ಗುರುಪ್ರಸಾದ್

ಚಿತ್ರದ ಬಗ್ಗೆ ಮಾತಾಡಿರುವ ಅವರು, ಇದೊಂದು ಐತಿಹಾಸಿಕ ಸಿನಿಮಾ ಎಂದು ಹೇಳುವುದರ ಮೂಲಕ ಇನ್ನಷ್ಟು ಕುತೂಹಲವನ್ನು ಹುಟ್ಟಿಸಿದ್ದಾರೆ. ಮರುಕ್ಷಣದಲ್ಲಿಯೇ, ಇದು ರಂಗಭೂಮಿ ಆಧಾರಿತ ಸಿನಿಮಾ ಎಂದೂ ಹೇಳಿದ್ದಾರೆ. ಅಷ್ಟಕ್ಕೆ ನಿಲ್ಲದೆ, ಇಂದಿನ ದಿನದ ಕಥೆಯ ಎಳೆಯೂ ಇದರಲ್ಲಿದೆ ಎಂದು ಬೇರೆ ಹೇಳಿದ್ದಾರೆ. ಐತಿಹಾಸಿಕ ಸಿನಿಮಾವೂ ಆಗಿ, ರಂಗಭೂಮಿಯಾಧಾರಿತ ಸಿನಿಮಾವೂ ಆಗಿ, ಸಮಕಾಲೀನ ಕಥೆಯೂ ಇರುವುದು ಹೇಗೆ ಎಂಬ ಪ್ರಶ್ನೆಯನ್ನೆಲ್ಲ ಗುರುಪ್ರಸಾದ್ ಎದುರು ಕೇಳುವಂತಿಲ್ಲ. ಕುತೂಹಲ ತಣಿಸಿಕೊಳ್ಳಲು ಸಿನಿಮಾ ಬಿಡುಗಡೆಯಾಗುವವರೆಗೂ ಕಾಯಲೇ ಬೇಕು.

ಆದರೆ ರಂಗಭೂಮಿಯ ರಾಜನ ವೇಷದಲ್ಲಿದ್ದ ಜಗ್ಗೇಶ್ ಅವರು ಮಿರಿಮಿರಿ ಮಿನುಗುತ್ತ, ಹಿರಿಹಿರಿ ಹಿಗ್ಗುತ್ತ, ನಗುತ್ತ ಸೆಟ್‌ನಲ್ಲಿದ್ದಿದ್ದು ಮಾತ್ರ ಎಲ್ಲರ ಗಮನಸೆಳೆಯುವಂತಿತ್ತು. ಗುರುಪ್ರಸಾದ್ ಅವರ ಬೆಳ್ಳಗಾಗುತ್ತಿರುವ ಗಡ್ಡವೂ, ನುಣ್ಣಗೆ ಬೋಳಿಸಿದ ಜಗ್ಗೇಶ್ ಗಡ್ಡದ ಹೊಳಪೂ ಒಂದಕೊಂದು ಹೇಗೆ ಹೊಂದಿಕೊಂಡು 'ರಂಗನಾಯಕ'ನ ಕಟ್ಟುತ್ತದೆ ಎಂಬ ಕುತೂಹಲವಂತೂ ಗಾಂಧಿನಗರದಲ್ಲಿ ಮನೆಮಾಡಿದೆ.

ಚಿತ್ರಗಳು: ಕೆ.ಎನ್. ನಾಗೇಶ್‌ಕುಮಾರ್